ಏನು ಕಾರ್ಯದರ್ಶಿಗಳು ಇದ್ದಾರೆ ಇವರಷ್ಟು ಮಾಡತಕ್ಕ ಅವ್ಯವಹಾರಗಳು ಕೇವಲ ಒಂದೇ ತಾಲ್ಲೂಕಿಗೆ ಸೀಮಿತವಾಗಿಲ್ಲ ಎಲ್ಲಾ ತಾಲ್ಲೂಕುಗಳಲ್ಲಿ ರಾಜ್ಯಾದ್ಯಂತ ಇದು ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ, ದಕ್ಷ ಆಡಳಿತ ಕೊಡಬೇಕೆಂದು ಹೇಳುತ್ತಾರೆ. ಗ್ರಾಮಸೇವಕರು ಮತ್ತು ಗ್ರಾಮಪಂಚಾಯಿತಿ ಕಾರ್ಯದರ್ಶಿ ಈ ಇಬ್ಬರನ್ನು ಕೆಲಸ ಮಾಡಲು ತೊಡಗಿಸಿಬಿಟ್ಟರೆ ಬಹಳ ದೊಡ್ಡ ಸಾಧನೆ ಮಾಡಿದಂತಾಗುತ್ತದೆ. ನಮ್ಮ ಸರ್ಕಾರದಲ್ಲೂ ಪರಿಣಾಮಕಾರಿಯಾಗಿತ್ತು ಎಂದು ಹೇಳುವುದಿಲ್ಲ ಮೂಲಭೂತವಾಗಿ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಗ್ರಾಮಸೇವಕರುಗಳು ಪರಿಣಾಮಕಾರಿಯಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವುದನ್ನು ಮಾಡಿಬಿಟ್ಟರೆ ಸರ್ಕಾರವೂ ಪರಿಣಾಮಕಾರಿಯಾಗಿಬಿಡುತ್ತದೆ. ಆ ಕೆಲಸವನ್ನು ಮಾಡಬೇಕು.

ಶ್ರೀ ಎಂ.ವೈ.ಘೋರ್ಪಡೆ: ಪಂಚಾಯಿತಿ ಕಾರ್ಯದರ್ಶಿಯವರ ದಕ್ಷತೆ ಸಾಕಷ್ಟು ಇಲ್ಲ ಅದನ್ನು ಉತ್ತಮಪಡಿಸಬೇಕೆಂದು ಹೇಳುವುದಾದರೆ ಅದರ ಕಡೆ ನಾವೆಲ್ಲರೂ ಲಕ್ಷ್ಯವನ್ನು ಕೊಡಬೇಕಾಗುತ್ತದೆ. ಅದರ ಬಗ್ಗೆ ನಾವು ಖಂಡಿತ ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.

ದಾವಣಗೆರೆ ಬಿ.ಡಿ.ಟಿ. ಕಾಲೇಜಿನ ಸ್ಥಿತಿ.

೧೫೫(೧೬೭೨)

ಶ್ರೀ ರವಿಂದ್ರನಾಥ್ ಎಸ್.ಎ. (ಮಾಯಕೊಂಡ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆಯಲ್ಲಿರುವ ಬಿಡಿಟಿ ಕಾಲೇಜು, ಸರ್ಕಾರದ್ದೇ ಅಥವಾ ಖಾಸಗಿಯೆ;

ಆ) ಇದರ ಸ್ಥಾಪನೆಯಾಗಿ ಎಷ್ಟು ವರ್ಷವಾಯ್ತು;

ಇ) ಇದರ ಅಭಿವೃದ್ಧಿಗೆ ಸ್ಥಳೀಯರ ಸಹಕಾರ ಇದೆಯೆ;

ಈ) ಸದರಿ ಕಾಲೇಜು ತಾಂತ್ರಿಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿಲ್ಲವೆ; ಸೇರಿಲ್ಲದಿದ್ದಲ್ಲಿ ಕಾರಣಗಳೇನು;

ಉ) ಇದರ ವ್ಯಾಪ್ತಿಗೊಳಪಡುವ ಕುವೆಂಪು ವಿಶ್ವವಿದ್ಯಾಲಯ ಕಾಲೇಜು ಅಭಿವೃದ್ಧಿಗೆ ಯಾವ ಕ್ರಮ ಕೈಗೊಂಡಿದೆ?

ಡಾ: ಜಿ.ಪರಮೇಶ್ವರ: (ಉನ್ನತ ಶಿಕ್ಷಣ ಸಚಿವರು):

ಅ) ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜು.

ಆ) ೧೯೫೧ ರಲ್ಲಿ

ಇ) ೧೯೫೨ರಲ್ಲಿ ಶ್ರೀ ಬ್ರಹ್ಮಪ್ಪ ದೇವೇಂದ್ರಪ್ಪ ಥಾವನಪ್ಪನವರ್‌ರವರು ೧.೫ ಲಕ್ಷ ರೂ.ಗಳನ್ನು ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ನೀಡಿದ್ದರು. ಆದ್ದರಿಂದ ಕಾಲೇಜಿಗೆ ಅವರ ಹೆಸರನ್ನು ಇಡಲಾಗಿದೆ; ನಂತರ ಯಾವುದೇ ನೆರವು ದೊರಕಿಲ್ಲ.

ಈ) ಇಲ್ಲ.

ತಾಂತ್ರಿಕ ವಿಶ್ವವಿದ್ಯಾಲಯವು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದು ಕಾಲೇಜನ್ನು ವಹಿಸಿಕೊಳ್ಳಲು ಸದೃಢವಾಗಿಲ್ಲ.

ಉ) ಅಭಿವೃದ್ಧಿ ಕಾರ್ಯವನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುತ್ತಿದೆ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ದಾವಣಗೆರೆಯ ಬಿ.ಡಿ.ಟಿ. ಕಾಲೇಜು ಸರ್ಕಾರದ್ದೇ ಅಥವಾ ಖಾಸಗಿಯದ್ದೇ ಎಂದು ಕೇಳಿದ್ದೆ ಅದಕ್ಕೆ ಕುವೆಂಪು ವಿಶ್ವವಿದ್ಯಾನಿಲಯದ್ದು ಅಂದರೆ ಸರ್ಕಾರದ್ದಲ್ಲವೆನ್ನುವ ರೀತಿಯಲ್ಲಿ ಉತ್ತರ ನೀಡಿದ್ದಾರೆ. ಇದರ ಸ್ಥಾಪನೆಯು ಯಾವಾಗ ಆಗಿದೆ ಎಂಬ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಇದು ವಿಶ್ವೇಶ್ವರಯ್ಯ ವಿಶ್ವವಿದ್ಯಾನಿಲಯಕ್ಕೆ ಏಕೆ ಸೇರಿಲ್ಲವೆಂದು ಕೇಳಿದ್ದೆ. ಅದು ಇನ್ನೂ ಬಾಲ್ಯಾವಸ್ಥೆಯಲ್ಲಿದೆಯೆಂದು ಉತ್ತರ ನೀಡಿದ್ದಾರೆ. ಪಟ್ಟಭದ್ರ ಹಿತಾಸಕ್ತಿಗಳು ಅಲ್ಲಿರುವುದರಿಂದ ಆ ಕಾಲೇಜನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಇದು ಪತ್ರಿಕೆಗಳಲ್ಲೂ ಸಾಕಷ್ಟು ಸಲ ಬಂದಿದೆ. ಅಲ್ಲಿ ಇನ್ನೊಂದು ಇಂಜಿನಿಯರಿಂಗ್ ಕಾಲೇಜು ಇದೆ, ಅದು ವಿಶ್ವೇಶ್ವರಯ್ಯ ವಿಶ್ವವಿದ್ಯಾನಿಲಯಕ್ಕೆ ಒಳಪಡುತ್ತಿದೆ. ಆದರೆ ನಮ್ಮ ಕಾಲೇಜು ಈ ರೀತಿ ಒಳಪಡುತ್ತಿಲ್ಲ ಸರ್ಕಾರಿ ಕಾಲೇಜುಗಳು ಅಲ್ಲಿ ಯಾವುದೂ ಇರಬಾರದು ಎಂದು ಪಟ್ಟಭದ್ರಹಿತಾಸಕ್ತಿಗಳು ಪ್ರಯತ್ನ ಮಾಡುತ್ತಿದ್ದಾರೆಂದು ಜನರು ಮಾತನಾಡುತ್ತಿದ್ದಾರೆ. ಪತ್ರಿಕೆಗಳಲ್ಲೂ ಬಂದಿದೆ, ಅದನ್ನು ಅವರಿಗೆ ಕಳಿಸಿಕೊಡುತ್ತಿದ್ದೇನೆ.

೧೦.೫೦ ಎ.ಎಂ.

ಶ್ರೀ ಡಾ.ಜಿ.ಪರಮೇಶ್ವರ್:ಸನ್ಮಾನ್ಯ ಅಧ್ಯಕ್ಷರೇ, ದಾವಣಗೆರೆಯಲ್ಲಿರತಕ್ಕಂಥ ಬಿಡಿಟಿ ಇಂಜಿನಿಯರಿಂಗ್ ಕಾಲೇಜ್ ಬಹಳ ಪ್ರತಿಷ್ಠಿತವಾದಂತಹ ಕಾಲೇಜಾಗಿದೆ. ೧೯೫೧ರಲ್ಲಿ ಸನ್ಮಾನ್ಯ ಬ್ರಹ್ಮಪ್ಪ ದೇವೇಂದ್ರಪ್ಪನವರ ಒಂದೂವರೆ ಲಕ್ಷ ರೂಪಾಯಿಗಳ ದೇಣಿಗೆಯ ಮೇಲೆ ಈ ಕಾಲೇಜನ್ನು ಪ್ರಾರಂಭ ಮಾಡಲಾಗಿದೆ. ಇತ್ತೀಚೆಗೆ ಹೊಸದಾಗಿ

ವಿಶ್ವೇಶ್ವರಯ್ಯ ಟೆಕ್ನಲಾಜಿಕಲ್ ಯೂನಿವರ್ಸಿಟಿ ಮಾಡಲಾಗಿದೆ. ಇದು ೧೯೯೮ರ ಏಪ್ರಿಲ್‌ನಲ್ಲಿ ಅಸ್ತಿತ್ವಕ್ಕೆ ಬಂದಿದೆ. ಆ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವಾಗ, ಸರ್ಕಾರದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳೆಲ್ಲವನ್ನೂ ಸಹಾ ನಾವು ಆ ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಡುತ್ತೇವೆ ಎನ್ನುವಂತಹ ತೀರ್ಮಾನವನ್ನೇನೂ ಮಾಡಿರಲಿಲ್ಲ. ಈಗ ಹೊಸದಾಗಿ ಸರ್ಕಾರಿ ಕಾಲೇಜ್‌ಗಳನ್ನು ಆ ವಿಶ್ವವಿದ್ಯಾನಿಲಯಕ್ಕೆ ವಹಿಸಕೊಡಬೇಕೆನ್ನುವ ವಿಚಾರ ನಮ್ಮ ಮುಂದೆ ಬಂದಿದೆ. ಈಗಾಗಲೇ ಆ ಕಾಲೇಜ್ ಕುವೆಂಪು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿದ್ದು ಅದನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಈಗ ಸ್ವಲ್ಪಮಟ್ಟಿನ ಹಣಕಾಸಿನ ತೊಂದರೆ ಇರುವುದರಿಂದ ಅವರಿಗೆ ಹಣ ಕೊಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ವಿಚಾರ ನಮ್ಮ ಗಮನಕ್ಕೂ ಕೂಡ ಬಂದಿದೆ. ಅದನ್ನು ಸರಿಪಡಿಸುವುದಕ್ಕೆ ಖಂಡಿತವಾಗಿಯೂ ನಾನು ಪ್ರಯತ್ನ ಮಾಡುತ್ತೇನೆ. ಈ ಕಾಲೇಜನ್ನು ವಿಶ್ವೇಶ್ವರಯ್ಯ ಟೆಕ್ನಲಾಜಿಕಲ್ ಯೂನಿವರ್ಸಿಟಿಗೆ ವಹಿಸಿಕೊಡಬೇಕೆಂದು ಮಾನ್ಯ ಸದಸ್ಯರು ಕೋರುತ್ತಿದ್ದಾರೆ. ಅದನ್ನೂ ಕೂಡ ಈಗಾಗಲೇ ನಾವು ಎಗ್ಸಾಮಿನ್ ಮಾಡುತ್ತಿದ್ದೇವೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ವಿಶ್ವವಿದ್ಯಾನಿಲಯ ಹೊಸದಾಗಿ ಪ್ರಾರಂಭ ಆಗಿದೆ. ಇನ್ನೂ ಕೂಡ ಬೇರೆ ಬೇರೆ ಅಫಿಲಿಯೇಟೆಡ್ ಕಾಲೇಜುಗಳನ್ನು ಅವರಿಗೆ ವಹಿಸಿಕೊಡುವುದಕ್ಕೆ ಸಾಧ್ಯವಿಲ್ಲವೆಂದು ಈಗ ಆ ಪ್ರಸ್ತಾವನೆಯನ್ನು ನಮ್ಮ ಮುಂದೆ ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ಆ ವಿಶ್ವವಿದ್ಯಾನಿಲಯದ ಆಕ್ಟ್ ಅನ್ನೂ ಕೂಡ ನಾವು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ವಿ.ಟಿ.ಯೂನಿವರ್ಸಿಟಿ ಆಕ್ಟ್ ಅನ್ನು ಅಮೆಂಡ್ ಮಾಡಿದ ಮೇಲೆ ಈ ಕಾಲೇಜನ್ನು ಅವರಿಗೆ ವಹಿಸಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೇ, ಈ ಟೆಕ್ನಲಾಜಿಕಲ್ ಯೂನಿವರ್ಸಿಟಿಯಿಂದ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡಿರುವವರಿಗೆ ಹುದ್ದೆಗಳು ಬೇಗನೇ ಸಿಗುತ್ತವೆ. ಕುವೆಂಪು ವಿಶ್ವವಿದ್ಯಾನಿಲಯದಿಂದ ಈ ಬಿಡಿಟಿ ಕಾಲೇಜಿನವರು ಸರ್ಟಿಫಿಕೇಟ್ ತೆಗೆದುಕೊಂಡರೆ ಹುಡುಗರಿಗೆ ಉದ್ಯೋಗವಕಾಶಗಳೇ ಹೆಚ್ಚು ಸಿಗುವುದಿಲ್ಲವಂತೆ. ಇದು ಇರುವಂತಹ ಪರಿಸ್ಥಿತಿಯಾಗಿದೆ. ಅದರ ಜೊತೆಗೆ ಅಲ್ಲಿ ಪ್ರತಿ ವರ್ಷವೂ ಕೂಡ ೭೦-೮೦ ಲಕ್ಷ ರೂಪಾಯಿಗಳ ಫೀಸನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಅಲ್ಲಿ ಯಾವುದೇ ಕಾರಣದಿಂದಲೂ ಕೂಡ ಕನಿಷ್ಟ ೧೦ ಲಕ್ಷ ರೂಪಾಯಿಗಳನ್ನೂ ಕೂಡ ಖರ್ಚು ಮಾಡಿರುವುದಿಲ್ಲ. ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಾಗಲೀ ನಡೆದಿಲ್ಲ. ಹೊಸದಾಗಿ ಪುಸ್ತಕಗಳನ್ನು ತರಿಸುವುದಾಗಲೀ ಅಥವಾ ಹೊಸ ಎಕ್ವಿಪ್‌ಮೆಂಟ್‌ಗಳನ್ನು ತರಿಸುವ ಕೆಲಸವಾಗಲೀ ಆ ಕಾಲೇಜಿನಲ್ಲಿ ನಡೆಯುತ್ತಿಲ್ಲ. ಇದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಡಾ: ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೇ, ಸದರಿ ಕಾಲೇಜ್ ಕಳೆದ ವರ್ಷ ಸುಮಾರು ೪೦ ಲಕ್ಷ ರೂಪಾಯಿಗಳ ಫೀಸನ್ನು ಕಲೆಕ್ಟ್ ಮಾಡಿದೆ. ಆದರೆ ಅದರಲ್ಲಿ ಕೇವಲ ೧೮ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ ಎನ್ನತಕ್ಕಂಥ ಮಾಹಿತಿ ನಮಗೆ ಬಂದಿದೆ. ಅಲ್ಲಿ ಏನೊಂದು ಫೀಸನ್ನು ಕಲೆಕ್ಟ್ ಮಾಡುತ್ತಾರೋ ಆ ಹಣವನ್ನು ಅದೇ ಕಾಲೇಜಿನಲ್ಲಿ ಖರ್ಚು ಮಾಡುವುದಕ್ಕೆ ನಾವು ಸರ್ಕಾರದಿಂದ ಆದೇಶವನ್ನು ಕೊಡುತ್ತೇವೆ. ಈಗಾಗಲೇ ಒಂದು ರೀತಿಯ ಭಾವನೆ ವಿದ್ಯಾರ್ಥಿಗಳಲ್ಲಿ ಬಂದಿದೆ. ವಿಶ್ವೇಶ್ವರಯ್ಯ ಟೆಕ್ನಲಾಜಿಕಲ್ ಯೂನಿವರ್ಸಿಟಿಯ ಸರ್ಟಿಫಿಕೇಟ್ ಇದ್ದರೆ ಮಾತ್ರ ನಮಗೆ ರೆಕಗ್ನಿಷನ್ ಸಿಗುತ್ತದೆ, ಬೇರೆ ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಂಗ್ ಕೋರ್ಸ್ ಮಾಡಿದರೆ ರೆಕಗ್ನಿಷನ್ ಸಿಗುವುದಿಲ್ಲ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡಿದೆ. ಈ ಬಗ್ಗೆ ಅನೇಕ ವಿದ್ಯಾರ್ಥಿಗಳೂ ಕೂಡ ನನಗೆ ಪತ್ರಗಳನ್ನು ಮತ್ತು ಮನವಿಗಳನ್ನು ಕೊಟ್ಟಿದ್ದಾರೆ. ಇದೆಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಂಡು ವಿಶ್ವೇಶ್ವರಯ್ಯ ಟೆಕ್ನಲಾಜಿಕಲ್ ಯೂನಿವರ್ಸಿಟಿ ಆ್ಯಕ್ಟ್‌ಗೆ ಸೂಕ್ತವಾದ ಅಮೆಂಡ್‌ಮೆಂಟ್ ಅನ್ನು ತರುವುದರ ಮೂಲಕ ಆ ಕಾಲೇಜನ್ನು ಯೂನಿವರ್ಸಿಟಿಗೆ ವಹಿಸಿಕೊಡುವುದಕ್ಕೆ ಮುಂದಿನ ಬರುವ ದಿನಗಳಲ್ಲಿ ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಎಸ್.ಎ. ರವಿಂದ್ರನಾಥ್: ಮಾನ್ಯ ಅಧ್ಯಕ್ಷರೇ, ಆ ಕಾಲೇಜಿನಲ್ಲಿ ಒಂದು ಫೀಲ್ಡ್ ಇದೆ. ಅದರಲ್ಲಿ ಒಂದು ರಸ್ತೆಯನ್ನು ಮಾಡಿಸಲಾಗಿದೆ. ಅದನ್ನು ನಗರಸಭೆಯವರು ಮಾಡಿಸಿದ್ದಾರೋ ಅಥವಾ ಪಟ್ಟಭದ್ರ ಹಿತಾಸಕ್ತಿಗಳು ಮಾಡಿಸಿದ್ದಾರೋ ಗೊತ್ತಿಲ್ಲ. ಆದರೆ ಆ ಫೀಲ್ಡ್‌ನಲ್ಲಿ ಈಗ ಎಲ್ಲಾ ಹುಡುಗರೂ ಆಟವಾಡದಂತೆ ತೊಂದರೆಯಾಗಿದೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಕೋರುತ್ತೇನೆ.

ಡಾ: ಜಿ.ಪರಮೇಶ್ವರ್: ಅದನ್ನು ಪರಿಶೀಲನೆ ಮಾಡುತ್ತೇನೆ.

ಸರ್ಕಾರಿ ಆಸ್ಪತ್ರೆಗಳಲ್ಲಿರುವ ಸಲಕರಣೆಗಳು.

೧೫೫೬(೧೬೭೬)

ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಟ್ಟಿರುವ